ಶ್ರೀ ಟಿ. ಎನ್. ನರಸಿಂಹಮೂರ್ತಿ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಹೇಳಬೇಕೆಂದರೆ, ಮಾನ್ಯ ಇದಿನಬ್ಬನವರು ಪ್ರಸ್ತಾಪ ಮಾಡಿರುವ ವಿಷಯ ಬಹಳ ಗಮನಾರ್ಹವಾಗಿದೆ. ಇದರ ಬಗ್ಗೆ ಸರ್ಕಾರ ಕೂಡ ಬಹಳಷ್ಟು ಚಿಂತನೆ ಮಾಡಿದೆ. ಆದಷ್ಟು ಬೇಗ ಈ ಅನಧಿಕೃತವಾಗಿರುವ ಮಾಡಿರುವ ಜಮೀನನ್ನು ಸಕ್ರಮಗೊಳಿಸಲು ಆದಷ್ಟು ಬೇಗ ಸರ್ಕಾರ ತನ್ನ ನೀತಿಯನ್ನು ನಿರೂಪಣೆ ಮಾಡಿ, ಈ ಜನರಿಗೆ ಸಹಾಯ ಮಾಡಲು ಎಲ್ಲ ರೀತಿಯ ಕ್ರಮವನ್ನು ಕೈಗೊಳ್ಳುತ್ತದೆಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

(೨) ಬೆಂಗಳೂರು ನಗರದ ನಾಗೇಂದ್ರ ಬ್ಲಾಕ್ ಗೇರ್ ಹಳ್ಳಿ ಬಡಾವಣೆ, ಮೈಸೂರು ಬ್ಯಾಂಕ್ ಕಾಲೋನಿಗಳಲ್ಲಿ ಬೀದಿ ನಲ್ಲಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದು,

ಶ್ರೀ ಪಿರಿಕಲ್ ಎ. ಮಲ್ಲಪ್ಪ (ಚಿಕ್ಕಪೇಟೆ). — ಮಾನ್ಯ ಉಪಾಧ್ಯಕ್ಷರೇ, ಬಡ ಜನರು ವಾಸ ಮಾಡುತ್ತಿರುವ ಬೆಂಗಳೂರು ನಗರದ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಬಡಾವಣೆ, ಮೈಸೂರು ಬ್ಯಾಂಕ್ ಕಾಲೋನಿಗಳಿಗೆ ಬೆಳಿಗ್ಗೆ ೪ ಗಂಟೆಯಿಂದ ೬ ಗಂಟೆವರೆಗೆ ಮಾತ್ರ ಕುಡಿಯುವ ನೀರನ್ನು ನೀರು ಸರಬರಾಜು ಮಂಡಲಿಯವರು ಸರಬರಾಜು ಮಾಡುತ್ತಿದ್ದಾರೆ. ಇದು ಕಡಿಮೆ ಅವಧಿ. ಆಗಿದೆ. ಇಲ್ಲಿ ರೆವಿನ್ಯೂ ನಿವೇಶನಗಳಿರುವುದರಿಂದ ನಲ್ಲಿ ಸಂಪರ್ಕಗಳೂ ಕಡಿಮೆ ದೂರು ಕೊಟ್ಟರೆ ಮೂರನೇ ದಿವಸ ನೀರನ್ನೇ ಬಿಡುವುದಿಲ್ಲ. ಆದಕಾರಣ ಕನಿಷ್ಠ ಬೆಳಿಗ್ಗೆ ೫ ರಿಂದ ೯ ರವರೆಗೆ ಅಂದರೆ ನಾಲ್ಕು ಗಂಟೆಗಳ ಕಾಲ ನೀರನ್ನು ಸರಬರಾಜು ಮಾಡಲು ಮಂಡಲಿ ಕ್ರಮ ತೆಗೆದುಕೊಳ್ಳುವಂತೆ ಸಂಬಂಧ ಪಟ್ಟವರಿಗೆ ಮಾನ್ಯ ಸಚಿವರು ಆದೇಶ ನೀಡಲು ಕೋರುತ್ತೇನೆ. ಇಲ್ಲಿ ಅನೇಕ ಕಡೆಗಳಲ್ಲಿ ಪೈಪ್‌ಗಳು ಒಡೆದು ನೀರು ಸುರಿಯುತ್ತಿದ್ದರೂ ನೀರು ಸರಬರಾಜು ಮಂಡಲಿ ಅವರು ನಿಧಾನವಾಗಿ ಕ್ರಮ ತೆಗೆದುಕೊಳ್ಳುತ್ತಾರೆ, ಇದರಿಂದ ನೀರಿಗಾಗಿ ಹೊಡೆದಾಟ ಆಗುತ್ತಿದೆ. ಆದಕಾರಣ ಬೀದಿ ನಲ್ಲಿಗಳ ಸಂಖ್ಯೆ ಜಾಸ್ತಿ ಮಾಡಬೇಕು ಹಾಗೂ ಜಿಇಎಸ್ ಕಾಲೇಜ್ ಹಿಂಭಾಗದಲ್ಲಿ ಕಟ್ಟುತ್ತಿರುವ ನೀರಿನ ಟ್ಯಾಂಕ್ ಕಾಮಗಾರಿಯನ್ನು ಜಾಗ್ರತೆ ಪೂರ್ಣಗೊಳಿಸಿ ಅಲ್ಲಿನ ಜನರಿಗೆ ಹೆಚ್ಚಿನ ನೀರನ್ನು ಸರಬರಾಜು ಮಾಡಬೇಕೆಂದು ವಿನಂತಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ(ನಗರಾಭಿವೃದ್ಧಿ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಪೆರಿಕಲ್ ಎಂ. ಮಲ್ಲಪ್ಪನವರು ಬೆಂಗಳೂರು ನಗರದ ಅವರ ಕ್ಷೇತ್ರಕ್ಕೆ ಸಂಬಂಧ ಪಟ್ಟ ಹಾಗೆ ಅದರಲ್ಲೂ ಕೂಡಾ ನಿರ್ದಿಷ್ಟವಾಗಿ ಅವರ ಕ್ಷೇತ್ರದ ಹಲವಾರು ಪ್ರದೇಶಗಳಲ್ಲಿ ನಾಗರೀಕರಿಗೆ ಕುಡಿಯುವ ನೀರಿನ ಬಗ್ಗೆ ಆಗುತ್ತಿರತಕ್ಕಂಥ ಕಳವಳದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಈ ಬೆಂಗಳೂರು ನೀರು ಸರಬರಾಜು ಮತ್ತು ಜಲಮಂಡಲಿಯೊಡನೆ ಸಂಪರ್ಕ ಮಾಡಿ ಅವರ ಒಂದು ಪ್ರಸ್ತಾಪದ ವಿಷಯದ ಬಗ್ಗೆ ಈ ರೀತಿ ಹೇಳಿಕೆಯನ್ನು ಮಾಡಲು ಇಷ್ಟಪಡುತ್ತೇನೆ.

ಪ್ರಸ್ತುತದಲ್ಲಿ ನಾಗೇಂದ್ರ ಬ್ಲಾಕ್ ಗೇರಹಳ್ಳಿ ಪ್ರದೇಶ, ಮೈಸೂರು ಬ್ಯಾಂಕ್ ಕಾಲೋನಿಗಳಿಗೆ ಬೇರೆ ಪ್ರದೇಶಗಳಿಗೆ ನೀಡುವಂತೆ ಪ್ರತಿನಿತ್ಯ ಬೆಳಿಗ್ಗೆ ೪ ಗಂಟೆಯಿಂದ ೬ ಗಂಟೆವರೆಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನೀರಿನ ವಿತರಣಾ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮಹಾನಗರದ ನಾಗರೀಕ ಅಗತ್ಯಗಳನ್ನು ಪೂರೈಸಲು ಜಲಮಂಡಲಿಯು ಹಲವಾರು ಪ್ರಾಮಾಣಿಕ ಕ್ರಮಗಳನ್ನು ಕೈಗೊಂಡಿದೆ.

ರೆವಿನ್ಯೂ ಪ್ರದೇಶಗಳಿಗೆ, ಬೆಂಗಳೂರು ಜಲಮಂಡಲಿಯು ತಾನೇ ಸಾರ್ವಜನಿಕ ಕೊಳಾಯಿಗಳನ್ನು ಹಾಕುವುದಿಲ್ಲ. ರೆವಿನ್ಯೂ ಪ್ರದೇಶದ ಹೆಚ್ಚಿನ ಸಾರ್ವಜನಿಕ ಕೊಳಾಯಿಗಳು ಅಕ್ರಮವಾಗಿದ್ದು, ಅವುಗಳನ್ನು ಕಿತ್ತುಹಾಕಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಸಾಮಾನ್ಯವಾಗಿ ಸಾರ್ವಜನಿಕ ಕೊಳಾಯಿಗಳನ್ನು ಬೆಂ. ಆ. ಪ್ರ : ಬೆಂ. ನ. ಸ.: ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಲ ಅಥವಾ ಬೆಂಗಳೂರು ಜಿಲ್ಲಾಧಿಕಾರಿಗಳಿಂದ ಬೇಡಿಕೆಗಳನ್ನು ಸ್ವೀಕರಿಸಿದ ನಂತರ ಹಾಕಲಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ನೀರಿನ ಬೇಡಿಕೆಯು ನಗರಕ್ಕೆ ಬರುತ್ತಿರುವ ಪ್ರಮಾಣಕ್ಕಿಂತ ಹೆಚ್ಚಿರುವುದರಿಂದ ನೀರಿನ ವಿತರಣಾ ವೇಳೆಯನ್ನು ೨ ಗಂಟೆಗಳ ಅವಧಿಗಿಂತ ಹೆಚ್ಚಿಸಲು ಸಾಧ್ಯವಾಗಿದೆ.

ಕೊಳವೆಗಳ ಸೋರುವಿಕೆಯ ಬಗ್ಗೆ ಬೆಂಗಳೂರು ಜಲ ಮಂಡಳಿಯು ಹೇಳುವುದೇನೆಂದರೆ, ಇವುಗಳನ್ನು ನಿಲ್ಲಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಸೋರುವಿಕೆಗಳು ಕಂಡ ತಕ್ಷಣ ದುರಸ್ತಿಕಾರ್ಯ ಕೈಗೊಳ್ಳಲಾಗುತ್ತಿದೆ. ಸಂಬಂಧಿಸಿದ ಸಂಸ್ಥೆಗಳಿಂದ ಕಛೇರಿಗಳಿಂದ ಸೂಕ್ತ ಬೇಡಿಕೆಗಳು ಬಂದಲ್ಲಿ, ಸಾರ್ವಜನಿಕ ಕೊಳಾಯಿಗಳ ಸಂಖ್ಯೆಯನ್ನು ಹೆಚ್ಚಿಸಬಹುದಾಗಿದೆ. ಆದಾಗ್ಯೂ ಈ ರೆವಿನ್ಯೂ ಪ್ರದೇಶದಲ್ಲಿನ ನಿವೇಶನಗಳನ್ನು ಕ್ರಮ ಬದ್ಧಗೊಳಿಸದವರೆಗೂ, ಈ ಪ್ರದೇಶಕ್ಕೆ ಹೆಚ್ಚು ಕೊಳಾಯಿಗಳನ್ನು ಹಾಕಲು ಸಾಧ್ಯವಿಲ್ಲ.